ಅಂದರೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆ ಒಂದೇ ಅಲ್ಲ, ಇದೇ ರೀತಿ ಅನೇಕ ಪ್ರಶ್ನೆಗಳಿವೆ. ನಮ್ಮ ಕನ್ನಡ ಮಾತನಾಡುವ ಬಂಧುಗಳು ಆಂಧ್ರದಲ್ಲಿ ಇದ್ದಾರೆ, ಕೇರಳದಲ್ಲಿದ್ದಾರೆ, ಮದ್ರಾಸ್‌ನಲ್ಲಿದ್ದಾರೆ, ಅಲ್ಲದೆ ಮಹಾರಾಷ್ಟ್ರದಲ್ಲೂ ಇದ್ದಾರೆ. ಎಂದಮೇಲೆ ಈ ಒಂದು ಏಕ ಸದಸ್ಯ ಸಮಿತಿ ಬರೀ ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆಯನ್ನು ಮಾತ್ರ ತೀರ್ಮಾನ ಮಾಡುವಹಾಗಿಲ್ಲ. ಏಕ ಸದಸ್ಯ ಸಮಿತಿ ಅಥವಾ ಬಹು ಸದಸ್ಯ ಸಮಿತಿಯೇನಾದರೂ ನೇಮಕವಾದರೆ ನಮ್ಮ ಕರ್ನಾಟಕ ಭಾಗದಿಂದ ಹೊರಕ್ಕೆ ಏನು ಹೋಗಿವೆ ಅವೆಲ್ಲಾ ನಮಗೆ ಸೇರುವ ಹಾಗೆ ತೀರ್ಮಾನ ಮಾಡುವುದಾದರೆ ಒಪ್ಪಬಹುದಾಗಿತ್ತು. ಆದುದರಿಂದ ಏಕ ಸದಸ್ಯ ಸಮಿತಿಯನ್ನು ನಾವು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ.

[Mr. SPEAKER in the Chair].

11-00 A.M.

1953 ರಲ್ಲಿ ಮದರಾಸಿನಲ್ಲಿದ್ದ ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳು ಮೈಸೂರಿಗೆ ಸೇರಿದುವು. ಇನ್ನು ಕೆಲವು ಭಾಗ ಆಂಧ್ರದಲ್ಲಿ ಸೇರಿತು. ಆಗ ಆಂಧ್ರ ಪ್ರಾಂತ ಎಂದು ಹೊಸದಾಗಿ ಆಯಿತು. ಹಾಗೆ ಆಂಧ್ರ ಪ್ರಾಂತವಾದಾಗ ನಮ್ಮ ಬಳ್ಳಾರಿಗೆ ನ್ಯಾಯವಾಗಿ ಬರಬೇಕಾದ ಭಾಗಗಳು ಬಾರದೆ ಇನ್ನೂ ಅರ್ಧ ಭಾಗ ಆಂಧ್ರದಲ್ಲೇ ಉಳಿದು ಹೋದವು. ಇದನ್ನು ನಮ್ಮ ರಾಜ್ಯಕ್ಕೆ ಪಡೆಯಬೇಕು ಎಂದು ಆಗ ಕೆ. ಪಿ. ಸಿ. ಸಿ. ಸದಸ್ಯರಾಗಿದ್ದ ಮತ್ತು ಈಗ ಮುಖ್ಯ ಮಂತ್ರಿಗಳಾಗಿರುವ ನಿಜಲಿಂಗಪ್ಪನವರನ್ನು ಇಲ್ಲಿರುವ ನಾಲ್ಕು ಲಕ್ಷ ಕನ್ನಡ ಜನ ಬಳ್ಳಾರಿ ಜಿಲ್ಲೆಗೆ ಸೇರಬೇಕೆಂದು ಕೇಳುತ್ತಿದ್ದರೂ ಇನ್ನೂ ಈ ಪ್ರಶ್ನೆ ಹಾಗೇ ಉಳಿದಿದೆ. ಇದರ ವಿಚಾರವನ್ನು ಆಗ ಇಲ್ಲಿಗೆ ಬಂದಿದ್ದ ಕಾಂಗ್ರೆಸ್ಸು ಅಧ್ಯಕ್ಷರಾದ ದೇಭರರಿಗೂ ಹಾಗೂ ಪ್ರಧಾನಿಗಳಾಗಿದ್ದ ಶ್ರೀ ನೆಹರೂರವರಿಗೂ ಹಾಗೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಿಗೂ ಹೇಳಿದರು. ಇದರ ಬಗ್ಗೆ ಇನ್ನೂ ಏನೂ ಆಗಲಿಲ್ಲ. ಇಂತಹ ಅನೇಕ ಭಾಗಗಳು ಇನ್ನೂ ಅಲ್ಲಲ್ಲಿ ಉಳಿದಿರುತ್ತವೆ. ಇದರ ಬಗ್ಗೆ ನಾವು ಹೋರಾಟ ಮಾಡಬೇಕಾಗಿದೆ. ಬಳ್ಳಾರಿ ಜಿಲ್ಲೆ ಬಗ್ಗೆ ಪ್ರಾಂತಪುನರ್ವಿಂಗಡಣಾ ಆಯೋಗದವರು ನಮ್ಮನ್ನೆ ಬಿಟ್ಟು ಬಿಟ್ಟರು ಎಂದು ಮಾನ್ಯ ಸದಸ್ಯರಾದ ಶ್ರೀ ಎ. ಎಸ್. ಪಾಟೀಲ್ ರವರು ಇಲ್ಲಿ ಹೇಳಿದರು. ನಾವು ಬಳ್ಳಾರಿಯನ್ನು ಭಿಕ್ಷೆ ಬೇಡಿ ತೆಗೆದುಕೊಂಡಿಲ್ಲ. ಹಿಂದೆ ಮಿಶ್ರರವರ ಅವಾರ್ಡು 1953 ರಲ್ಲಿ ಪಾಸಾದಂತೆ ಮಾಡಿದ್ದುದರಿಂದ ಎಸ್. ಆರ್. ಸಿ. ರಿಪೋರ್ಟ್‌ನಲ್ಲಿ ಇದನ್ನು ಮುಟ್ಟಲಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀ ಎ. ಎಸ್. ಪಾಟೀಲ್‌ರವರು ಹೇಳುವುದು ಸರಿಯಲ್ಲ. ಬಳ್ಳಾರಿಯ ಜನ ಕನ್ನಡ ರಾಜ್ಯದಲ್ಲಿಯೇ ಉಳಿಯುತ್ತಾರೆ ಎನ್ನುವುದನ್ನು ಇಲ್ಲಿ ಸ್ಪಷ್ಟ ಪಡಿಸುತ್ತೇನೆ. ಶ್ರೀ ಕದಂರವರು ಇಲ್ಲಿ ಮಾತನಾಡುತ್ತ ಮಹಾರಾಷ್ಟ್ರದವರೆಲ್ಲಾ ವೀರರು ಎಂದು ಹೇಳಿದರು. ಅವರಿಗೆ ನಾನು ಹೇಳುವುದು ಚರಿತ್ರೆ ನೋಡಿದರೆ ಅವರಿಗೇ ಗೊತ್ತಾಗುತ್ತದೆ. ಹಿಂದೆ ಬ್ರಿಟಿಷರು ನಮ್ಮ ರಾಜ್ಯದ ಮೇಲೆ ಹೋರಾಟ ಮಾಡಿದಾಗ ಆಗ ಇದ್ದ ಹೈದರಾಲಿ ಹಾಗೂ ಟಿಪ್ಪೂಸುಲ್ತಾನರೊಡಗೂಡಿ ಹೋರಾಡಿದ ಜನ ಕನ್ನಡ ಜನರೇ ಹೊರತು ಮಹಾರಾಷ್ಟ್ರದವರಲ್ಲ. ಆದರೆ ಮರಾಠಿಯವರಂತೆ ಕನ್ನಡ ಜನ ಹೋರಾಟ ಮಾಡಲು ಸಿದ್ಧರಾಗಿಲ್ಲ ಎನ್ನುವುದನ್ನು ಅವರು ಮನಗಾಣಬೇಕು. ನಾನು ಇಷ್ಟೇ ಹೇಳುವುದು. ಈಗ ಮಾಡಬೇಕೆಂದಿರುವ ಏಕ ಸದಸ್ಯ ಆಯೋಗವನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಕನ್ನಡ ನಾಡಿನ ಇನ್ನೂ ಎಷ್ಟೋ ಭಾಗಗಳು ಮದ್ರಾಸಿನಲ್ಲಿ ಹಾಗೂ ಆಂಧ್ರದಲ್ಲಿ ಉಳಿದಿವೆ. ಇದಕ್ಕಾಗಿ ಇನ್ನೂ ಯಾವ ಸಮಿತಿ ಮಾಡುವುದಕ್ಕೆ ಬರುವುದಿಲ್ಲ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚೆನ್ನಪ್ಪವಾಲಿ ನಂಪಗಾವ್.—ಸ್ವಾಮೀ, ನಾನು ಈಗ ಎರಡು ಮಾತು ಹೇಳಿ ಹೋಗುತ್ತೇನೆ. ಯಾವ ರೀತಿಯಾಗಿ ಇಲ್ಲಿ ಚರ್ಚೆಗೆ ಅವಕಾಶ ಸಿಗುತ್ತಿದೆ ಎನ್ನುವುದನ್ನು ವಿಷಾದದಿಂದ ಹೇಳಬೇಕಾಗಿ ಬಂದಿದೆ. ಗಡಿಯಲ್ಲಿ ಹೋರಾಟ ಮಾಡಿದಂತಹ ಜನರು ಇಲ್ಲಿ ಅನೇಕರಿದ್ದಾರೆ. ಇಂತಹ ಜನ ಇಲ್ಲಿ ಮಾತನಾಡಲು ಕಳೆದ ಐದು ದಿನಗಳಿಂದಲೂ ಅವಕಾಶ ಕೊಡಿ ಎಂದು ಕೇಳುತ್ತಿದ್ದರೂ ನಮಗೆ ಅವಕಾಶ ಸಿಕ್ಕುತ್ತಾ ಇಲ್ಲ. ಇದರಲ್ಲಿ ನಿಮಗೆ ಯಾವ ದ್ವೇಷ ಭಾವನೆ ಇದೆಯೋ ನಮಗೆ ಗೊತ್ತಾಗುತ್ತಿಲ್ಲ. ಬೆಳಗಾವಿ ಜಿಲ್ಲೆಯ ಕ್ಷೇತ್ರದಿಂದ ಈ ಅಸೆಂಬ್ಲಿಗೆ ಬಂದು ಇಷ್ಟು ದಿವಸಗಳಾದರೂ ಇಲ್ಲಿಯತನಕ ನಾನು ಮಾತನಾಡಲಿಲ್ಲ. ತಮ್ಮಂತಹವರು ಇಂತಹ ಸ್ಥಾನದಲ್ಲಿರುವುದು ಗೌರವವೂ ಅಲ್ಲ. ನೀವು ಇಲ್ಲಿರುವ ತನಕ ನಾನು ಮಾತನಾಡುವುದಿಲ್ಲ ಎಂದು ವ್ಯಸನದಿಂದ ಹೇಳಿ ಹೊರಗೆ ಹೋಗುತ್ತೇನೆ.

(At this stage the Hon'ble member walked out of the House).